ಕಬ್ಬು ಬೆಳೆಯುವ ಪ್ರದೇಶಗಳು

258 (465) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) :– ಮಾನ್ಯ ಕೃಷಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಕಬ್ಬು ಬೆಳೆಯುವ ಪ್ರದೇಶ ಎಷ್ಟು (ಜಿಲ್ಲಾವಾರು ವಿವರಗಳನ್ನು ನೀಡುವುದು);

(ಆ) ಕಬ್ಬು ಬೆಳೆಯುವ ಪ್ರದೇಶಗಳಿಗೆ ಉಪಯೋಗಿಸುವ ನೀರಿನ ಪ್ರಮಾಣ ಎಷ್ಟು ;

(ಇ) ಕಬ್ಬು ಬೆಳೆಯುವ ಎಷ್ಟು ಪ್ರದೇಶಗಳಿಗೆ ಡ್ರಿಪ್ ಇರಿಗೇಷನ್ ಅಳವಡಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಕಬ್ಬು ಬೆಳೆಯುವ ಎಲ್ಲಾ ಪ್ರದೇಶಗಳಿಗೂ ಡ್ರಿಪ್ ಇರಿಗೇಷನ್ ವ್ಯವಸ್ಥೆ ಮಾಡಿದರೆ ಉಳಿಯುವ ನೀರಿನ ಪ್ರಮಾಣ ಎಷ್ಟು ;

(ಉ) ಕಬ್ಬು ಬೆಳೆಯುವ ಎಲ್ಲಾ ಪ್ರದೇಶಗಳಿಗೂ ಡ್ರಿಪ್ ಇರಿಗೇಷನ್ ವ್ಯವಸ್ಥೆ ಮಾಡುವುದರಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉಳಿತಾಯವಾಗುತ್ತದೆ ;

(ಊ) ಡ್ರಿಪ್ ಇರಿಗೇಷನ್‌ಗೆ ವರ್ಷಕ್ಕೆ ನಿಗದಿಪಡಿಸುವ ಅನುದಾನದ ಮೊತ್ತ ಎಷ್ಟು ;

(ಋ) ಹಾಗಿದ್ದಲ್ಲಿ, ನಿಗದಿಪಡಿಸಿದ ಅನುದಾನದಲ್ಲಿ ಎಷ್ಟು ಖರ್ಚಾಗಿದೆ ಹಾಗೂ ಉಳಿಕೆ ಮೊತ್ತ ಎಷ್ಟು ? (ಜಿಲ್ಲಾವಾರು ವಿವರಗಳನ್ನು ನೀಡುವುದು);

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):–

2010–11ನೇ ಸಾಲಿನ ಕಬ್ಬಿನ ವಿಸ್ತೀರ್ಣದ ಜಿಲ್ಲಾವಾರು ವಿವರಗಳನ್ನು ಅನುಬಂಧ I ರಲ್ಲಿ ಲಗತ್ತಿಸಿದೆ.

ಕೃಷಿ ವಿಶ್ವ ವಿದ್ಯಾನಿಲಯ, ಧಾರವಾಡ ರವರು ತಿಳಿಸಿರುವಂತೆ ಕಬ್ಬು ಬೆಳೆಯುವ ಪ್ರದೇಶಗಳಿಗೆ ಉಪಯೋಗಿಸುವ ಒಟ್ಟು ನೀರಿನ ಪ್ರಮಾಣ 6.15 ಲಕ್ಷ ಕ್ಯೂಬಿಕ್ ಮೀಟರ್‌ನಷ್ಟಿದೆ.

2010–11ನೇ ಸಾಲಿನಲ್ಲಿ ರಾಜ್ಯದಲ್ಲಿ ಕಬ್ಬು ಬೆಳೆಯುವ 1518.18 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿ ಅಳವಡಿಸಲಾಗಿದೆ. ವಿವರಗಳನ್ನು ಅನುಬಂಧ–II ರಲ್ಲಿ ನೀಡಲಾಗಿದೆ.

ಸಂಪೂರ್ಣ ಕಬ್ಬಿನ ಕ್ಷೇತ್ರದಲ್ಲಿ ಹನಿ ನೀರಾವರಿಯನ್ನು ಅಳವಡಿಸಿಕೊಂಡಲ್ಲಿ ಅಂದಾಜು ಶೇ. 50 ರಷ್ಟು ನೀರಿನ ಉಳಿತಾಯವಾಗುತ್ತದೆ.

ಕಬ್ಬು ಬೆಳೆಯುವ ಎಲ್ಲಾ ಕ್ಷೇತ್ರದಲ್ಲಿ ಹನಿ ನೀರಾವರಿಯನ್ನು ಅಳವಡಿಸಿದರೆ ಅಂದಾಜು 2000 ಮೆಗಾವ್ಯಾಟ್ ವಿದ್ಯುತ್ತನ್ನು ಉಳಿತಾಯ ಮಾಡಬಹುದು ಎಂದು ಅಂದಾಜಿಸಲಾಗಿದೆ.

2011–12ನೇ ಸಾಲಿನ ಕಾರ್ಯಕ್ರಮದಲ್ಲಿ ಹನಿ ನೀರಾವರಿ ಘಟಕಗಳಿಗೆ ಒಟ್ಟು ರೂ. 1331.48 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

2011–12ನೇ ಸಾಲಿನಲ್ಲಿ ಹನಿ ನೀರಾವರಿ ಘಟಕದಡಿ ಇಲ್ಲಿಯವರೆಗೆ ವೆಚ್ಚ ಭರಿಸಿರುವುದಿಲ್ಲ.

ಅನುಬಂಧ–1

2010–11ನೇ ಸಾಲಿನಲ್ಲಿ ಜಿಲ್ಲವಾರು ಕಬ್ಬಿನ ವಿಸ್ತೀರ್ಣ

ಕ್ರ. ಸಂ.	ಜಿಲ್ಲೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1.	ಬಾಗಲಕೋಟೆ	79930
2.	ಬೆಂಗಳೂರು ನಗರ	0
3.	ಬೆಂಗಳೂರು ಗ್ರಾಮಾಂತರ	8
4.	ಬೆಳಗಾಂ	187899
5.	ಬಳ್ಳಾರಿ	1363
6.	ಬೀದರ್	30443
7.	ಬಿಜಾಪುರ	41377
8.	ಚಾಮರಾಜನಗರ	6422
9.	ಚಿಕ್ಕಬಳ್ಳಾಪುರ	0
10.	ಚಿಕ್ಕಮಗಳೂರು	817
11.	ಚಿತ್ರದುರ್ಗ	4
12.	ದ.ಕನ್ನಡ	0
13.	ದಾವಣಗೆರೆ	3497
14.	ಧಾರವಾಡ	3733
15.	ಗದಗ್	246
16.	ಗುಲ್ಬರ್ಗಾ	11415
17.	ಹಾಸನ	3105
18.	ಹಾವೇರಿ	1489
19.	ಕೊಪ್ಪಳ	188
20.	ಕೊಡಗು	0
21.	ಕೋಲಾರ	0
22.	ಮಂಡ್ಯ	29235
23.	ಮೈಸೂರು	10934
24.	ರಾಯಚೂರು	0
25.	ರಾಮನಗರ	924
26.	ಶಿವಮೊಗ್ಗ	5900
27.	ತುಮಕೂರು	1650
28.	ಉಡುಪಿ	68
29.	ಉ. ಕನ್ನಡ	0
30.	ಯಾದಗೀರ್	30
	ಒಟ್ಟು	**420677**

ಅನುಬಂಧ–II

2010–11ನೇ ಸಾಲಿನ ಕಬ್ಬು ಬೆಳೆಯುವ ಪ್ರದೇಶಗಳಿಗೆ ಅಳವಡಿಸಿದ ಹನಿನೀರಾವರಿಯ ಜಿಲ್ಲಾವಾರು ವಿವರ

ಕ್ರ. ಸಂ.	ಜಿಲ್ಲೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1.	ಬೆಳಗಾಂ	714
2.	ಗದಗ್	71
3.	ಬೀದರ್	367.67
4.	ಬಳ್ಳಾರಿ	15
5.	ದಾವಣಗೆರೆ	35
6.	ಬಾಗಲಕೋಟೆ	315.51
	ಒಟ್ಟು	**1518.18**

ಅನುಬಂಧ–III

2011–12ನೇ ಸಾಲಿಗೆ ಜಿಲ್ಲಾವಾರು ಹನಿ ನೀರಾವರಿ ಕಾರ್ಯಕ್ರಮ (ಸಾಮಾನ್ಯ ಜಿಲ್ಲೆಗಳು)

ಕರ್ನಾಟಕ ರಾಜ್ಯ ವಿಸ್ತೀರ್ಣ: ಹೆಕ್ಟೇರ್ ನಿಗದಿಪಡಿಸಿದ ಅನುದಾನ ಲಕ್ಷ ರೂ.ಗಳಲ್ಲಿ

ಕ್ರ. ಸಂ.	ಸಾಮಾನ್ಯ ಜಿಲ್ಲೆಗಳು	ವಿಸ್ತೀರ್ಣ	ಹನಿನೀರಾವರಿ ಒಟ್ಟು ವೆಚ್ಚ	ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು ಸಹಾಯಧನ
1	ಬೆಂಗಳೂರು ನಗರ	0	0.00	0.00	0.00	0.00
2	ಬೆಂ. ಗ್ರಾಮಾಂತರ	1	0.98	0.39	0.34	0.73
3	ರಾಮನಗರ	9	8.78	3.51	3.07	6.59
4	ಕೋಲಾರ	0	0.00	0.00	0.00	0.00
5	ಚಿಕ್ಕಬಳ್ಳಾಪುರ	104	101.50	40.60	35.53	76.13
6	ತುಮಕೂರು	11	10.74	4.29	3.76	8.05
7	ದಾವಣಗೆರೆ	37	36.11	14.44	12.64	27.08
8	ಮೈಸೂರು	36	35.14	14.05	12.30	26.35
9	ಚಾಮರಾಜನಗರ	110	107.36	42.94	37.58	80.52
10	ಮಂಡ್ಯ	35	34.16	13.66	11.96	25.62
11	ದಕ್ಷಿಣ ಕನ್ನಡ	0	0.00	0.00	0.00	0.00

12	ಉಡುಪಿ	0	0.00	0.00	0.00	0.00
13	ಧಾರವಾಡ	23	22.45	8.98	7.86	16.84
14	ಗದಗ್	64	62.46	24.99	21.86	46.85
15	ಹಾವೇರಿ	23	22.45	8.98	7.86	16.84
16	ಉತ್ತರ ಕನ್ನಡ	0	0.00	0.00	0.00	0.00
17	ಬಿಜಾಪುರ	34	33.18	13.27	11.61	24.89
18	ಬಾಗಲಕೋಟೆ	570	556.31	222.52	194.71	417.23
19	ರಾಯಚೂರು	0	0.00	0.00	0.00	0.00
20	ಕೊಪ್ಪಳ	70	68.32	27.33	23.91	51.24
21	ಬಳ್ಳಾರಿ	12	11.71	4.68	4.10	8.78
22	ಗುಲ್ಬರ್ಗಾ	115	112.24	44.90	39.28	84.18
23	ಬೀದರ್	225	219.60	87.84	76.86	164.70
24	ಯಾದಗಿರ್	0	0.00	0.00	0.00	0.00
	ಒಟ್ಟು	**1479**	**1443.47442**	**577.389768**	**505.216047**	**1082.61**

2011–12ನೇ ಸಾಲಿಗೆ ಜಿಲ್ಲಾವಾರು ಹನಿ ನೀರಾವರಿ ಕಾರ್ಯಕ್ರಮ (ಪ್ರಧಾನ ಮಂತ್ರಿಗಳ ವಿಶೇಷ ಕಾರ್ಯಕ್ರಮದ ಜಿಲ್ಲೆಗಳು)

ಕರ್ನಾಟಕ ರಾಜ್ಯ	ವಿಸ್ತೀರ್ಣ: ಹೆಕ್ಟೇರ್		ನಿಗದಿಪಡಿಸಿದ ಅನುದಾನ ಲಕ್ಷ ರೂ. ಗಳಲ್ಲಿ		
ಕ್ರ.		ಹನಿನೀರಾವರಿ			
ಸಂ.	ಸಾಮಾನ್ಯ ಜಿಲ್ಲೆಗಳು	ವಿಸ್ತೀರ್ಣ	ಒಟ್ಟು ವೆಚ್ಚ	ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು ಸಹಾಯಧನ
1	ಶಿವಮೊಗ್ಗ	0	0.00	0.00	0.00	0.00
2	ಚಿತ್ರದುರ್ಗ	18	17.57	7.03	6.15	13.18
3	ಕೊಡಗು	0	0.00	0.00	0.00	0.00
4	ಹಾಸನ	0	0.00	0.00	0.00	0.00
5	ಚಿಕ್ಕಮಗಳೂರು	2	1.95	0.78	0.68	1.46
6	ಬೆಳಗಾಂ	320	312.31	124.93	109.31	234.24
	ಒಟ್ಟು	340	331.8332	132.73328	116.14162	248.87
	ಮಹಾ ಮೊತ್ತ	**1819**	**1775.30762**	**710.123048**	**621.357667**	**1331.48**